**ಪಾಠ-13** **ಸೆಪ್ಟೆಂಬರ್ 19-25**

# ನಂಬಿಕೆಯಲ್ಲಿ ಒಂದು ಹೆಜ್ಜೆ



**ಸಬ್ಬತ್ತು ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ಫಿಲಿಪ್ಪಿ 2:5–11; ಮತ್ತಾಯ 4:18–20; ಅಪೊಸ್ತಲ 9:3–6,10–20; ಯೋಹಾನ 21:15–19; 1 ಯೋಹಾನ 3:16–18.

**ಸ್ಮರಣವಾಕ್ಯ : "ಕ್ರಿಸ್ತ ಯೇಸುವಿನಲ್ಲಿದಂಥ ಮನಸ್ಸು ನಿಮ್ಮಲ್ಲಿಯೂ ಇರಲಿ ಆತನು ದೇವಸ್ವರೂಪನಾಗಿದ್ದರೂ ದೇವರಿಗೆ ಸರಿಸಮಾನನಾಗಿರುವದೆಂಬ ಅಮೂಲ್ಯ ಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ ತನ್ನನ್ನು ಬರಿದು ಮಾಡಿಕೊಂಡು ದಾಸನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶನಾದನು"** (ಫಿಲಿಪ್ಪಿ 2:5–7).

ಪರಲೋಕವು ಮಹಿಮೆಗಳನ್ನು, ದೇವದೂತರ ಆರಾಧನೆಯನ್ನು, ತಂದೆಯ ಒಡನಾಟವನ್ನು ತ್ಯಜಿಸುವುದು ಊಹಿಸಿಕೊಳ್ಳಲು ಅಸಾಧ್ಯವಾದ ತ್ಯಾಗವಾಗಿದೆ. ಆದರೂ, ತಂದೆಯ ಪ್ರೀತಿಯ ಗುಣವನ್ನು ಪ್ರಕಟಿಸಲು, ಮಾನವ ಜನಾಂಗದ ವಾತ್ಸಲ್ಯವನ್ನು ಹಿಂತಿರುಗಿ ಪಡೆಯಲು ಮತ್ತು ಎಲ್ಲಾ ಮನುಕುಲವನ್ನು ವಿಮೋಚಿಸಲು, ಯೇಸು ಈ ಸಂಕಟ ಮತ್ತು ಮರಣದ ಲೋಕಕ್ಕೆ ಬಂದನು. "ವಿಮೋಚಿಸಲ್ಪಟ್ಟ ದೇವರ ಸಿಂಹಾಸನದ ಮುಂದೆ ವಿಮೋಚಕನೊಡನೆ ನಿಲ್ಲುವವರೆಗೂ ನಮ್ಮ ವಿಮೋಚನೆಯ ಮೌಲ್ಯವನ್ನು ಎಂದಿಗೂ ಅರಿತುಕೊಳ್ಳಲು ಸಾಧ್ಯವಿಲ್ಲ. ನಂತರ ನಿತ್ಯತ್ವದ ಮನೆಯ ಮಹಿಮೆಯಂತೆ ಸಂತೋಷದಿಂದ ತುಂಬಿದ ನಮ್ಮ ಭಾವನೆಗಳು ಇದ್ದಕ್ಕಿದ್ದಂತೆ ಹೊರಹೊಮ್ಮಿದಾಗ ಯೇಸು ಇದನ್ನೆಲ್ಲಾ ನಮಗಾಗಿ ಬಿಟ್ಟಿದ್ದಾನೆಂದು ನಾವು ನೆನಪಿಸಿಕೊಳ್ಳುತ್ತೇವೆ, ಆತನು

ಪರಲೋಕದ ನ್ಯಾಯಾಸನದಿಂದ ಗಡಿಪಾರದದ್ದು ಮಾತ್ರವಲ್ಲ, ಆದರೆ ನಮಗಾಗಿ ಅಪಜಯ ಮತ್ತು ನಿತ್ಯ ನಷ್ಟದ ಅಪಾಯವನ್ನು ತೆಗೆದುಕೊಂಡಿದ್ದಾನೆ. ನಂತರ ನಾವು ನಮ್ಮ ಕಿರೀಟಗಳನ್ನು ಆತನ ಪಾದದ ಬಳಿಯಲ್ಲಿಡುತ್ತೇವೆ, ಮತ್ತು ವದಿನಾದ ಕುರಿಯಾದಾತನು ಬಲ ಐಶ್ವರ್ಯ ಜ್ಞಾನ ಸಾಮರ್ಥ್ಯಮಾನ ಪ್ರಭಾವ ಸ್ತೋತ್ರಗಳನ್ನು ಹೊಂದುವುದಕ್ಕೆ ಯೋಗ್ಯನು' ಎಂದು ಸ್ವರವೆತ್ತಿ ಹಾಡುತ್ತೇವೆ ಪ್ರಕಟನೆ 5:12"– ಎಲೆನ್ ಜಿ ವೈಟ್, ದಿ ಡಿಸೈರ್ ಆಫ್ ಏಜಸ್, ಪುಟ 131.

ನಮ್ಮ ರಕ್ಷಣೆಗಾಗಿ ಯೇಸು ಮಾಡಿದ ತ್ಯಾಗವನ್ನು ಎಣಿಸಲು ಆಗುವುದಿಲ್ಲ. ಆತನ ಮುನ್ನಡೆಸುವಿಕೆಗೆ ನಾವು ಪ್ರತಿಕ್ರಿಯಿಸಿದಾಗ, ಆತನ ಆಜ್ಞೆಯನ್ನು ಅಂಗೀಕರಿಸಿ ಮತ್ತು ಆತನ ರಾಜ್ಯಕ್ಕಾಗಿ ಕಳೆದುಹೋದ ಜನರನ್ನು ತಲುಪುವಲ್ಲಿ ಆತನೊಂದಿಗೆ ಒಂದಾಗುವಾಗ, ಅದು ತ್ಯಾಗಕ್ಕಾಗಿ ಕರೆ ನೀಡುತ್ತದೆ. ಆದಾಗ್ಯೂ ನಂಬಿಕೆಯಲ್ಲಿ ಮುಂದಿನ ಫಲವರಿಯದ ಕೆಲಸಕ್ಕೆ ಕೈ ಹಾಕುವುದು. ಹಾಗೆಯೇ, ನಮಗಾಗಿ ಆತ್ಮಗಳನ್ನು ಗೆಲ್ಲುವ, ಆತನ ಸೇವೆಯೊಂದಿಗೆ ನಮ್ಮ ತ್ಯಾಗಗಳನ್ನು ಎಂದಿಗೂ ಹೋಲಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ತಾವು ಸುರಕ್ಷಿತವೆಂದು ಭಾವಿಸುವ ಪರಿಸ್ಥಿತಿಯಿಂದ ನಿಮಗೆ ಪರಿಚಯವಿಲ್ಲದ, ಭಾಗ್ಯಕರ ಪರಿಸ್ಥಿತಿ ಮತ್ತು ಅಪಾಯಕಾರ ಸ್ಥಿತಿಗೆ ಅದು ನಿಮ್ಮನ್ನು ಮುನ್ನಡೆಸಬಹುದು. ಒಂದೊಂದು ಸಲ ನಮ್ಮ ಕರ್ತನು ತ್ಯಾಗ ಮಾಡುವುದಕ್ಕಾಗಿ ನಮ್ಮನ್ನು ಕರೆಯುತ್ತಾನೆ, ಆದರೆ ಆತನು ಕೊಡುವ ಸಂತೋಷವು ಅಪರಿಮಿತವಾಗಿರುತ್ತದೆ.

**ಭಾನುವಾರ** **ಸೆಪ್ಟೆಂಬರ್ 20**

## ಯೇಸುವಿನ ಸ್ವಯಂ ತ್ಯಾಗದ ಪ್ರೀತಿ

ಅಪೋಸ್ತಲನಾದ ಪೌಲನು ನಮ್ಮಲ್ಲಿ ಕ್ರಿಸ್ತನ ಮನಸ್ಸು ನೆಲೆಗೊಳ್ಳಲು "ಅಸ್ಪದ" ಅಥವಾ "ಅನುಮತಿ" ಅಥವಾ "ಅರ್ಪಣೆ ಕೊಡು" ಎಂದು ನಮ್ಮನ್ನು ಪ್ರೋತ್ಸಾಹಿಸುತ್ತಾನೆ. ಕ್ರಿಸ್ತನ ಮನಸ್ಸು ಯಾವ ರೀತಿಯಾಗಿತ್ತು? ಆತನ ಆಲೋಚನಾ ಮಾದರಿಯನ್ನು ಯಾವುದು ಆಡಳಿತ ಮಾಡುತ್ತಿತ್ತು? ಆತನ ಚಿಂತನೆಯ ಮೂಲತತ್ವ ಏನು? ಎಂಬ ಕೆಲವು ಆಕರ್ಷಕ ಪ್ರಶ್ನೆಗಳಿಗೆ ಇದು ನಮ್ಮನ್ನು ಕರೆದೊಯ್ಯುತ್ತದೆ.

ಫಿಲಿಪ್ಪಿ 2:5–11 ಓದಿರಿ. ಈ ವಚನಗಳು ಕ್ರಿಸ್ತನ ಹೃದಯದ ಆಲೋಚನೆ ಮತ್ತು ಆತನ ಇಡೀ ಜೀವವನ್ನು ಆಳುತ್ತಿದ್ದ ಆದರ್ಶವನ್ನು ಹೇಗೆ ಬಹಿರಂಗಪಡಿಸುತ್ತವೆ?

ಯೇಸು ಯುಗಯುಗಾಂತರಗಳಿಂದಲೂ ದೇವರೊಂದಿಗೆ ಸರಿಸಮಾನನಾಗಿದ್ದನು. "ಆತನು ದೇವಸ್ವರೂಪನಾಗಿದ್ದರೂ ದೇವರಿಗೆ ಸರಿಸಮಾನನಾಗಿರುವದೆಂಬ ಅಮೂಲ್ಯವಾದ ಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ" (ಫಿಲಿಪ್ಪಿ 2:6) ಎಂಬೀ ವಾಕ್ಯಗಳಲ್ಲಿ ಈ ನಿತ್ಯ ಸತ್ಯವನ್ನು ಪೌಲನು ಘೋಷಿಸುತ್ತಾನೆ. "ಸ್ವರೂಪ" ಎಂದು ಅನುವಾದಿಸಲಾದ ಪದ "ಮಾರ್ಫೆ" ಎಂಬ ಗ್ರೀಕ್ ಪದವಾಗಿದೆ. 'ಒಂದು ವಸ್ತುವಿನ ಮೂಲ ಸ್ವಭಾವ' ಎಂದು ಇದರ ಅರ್ಥ. ಇದು ಸರಿಸಮಾನ ಮೌಲ್ಯವನ್ನು ಹೊಂದಿರುವ ಎರಡು ವಿಷಯ (ವಸ್ತು)ಗಳನ್ನು ಜೋಡಿಸುತ್ತದೆ. ಎಸ್.ಡಿ.ಎ. ಬೈಬಲ್ ಕಾಮೆಂಟರಿಯು ಈ ರೀತಿಯಾಗಿ ಹೇಳುತ್ತದೆ : "ಇದು ಕ್ರಿಸ್ತನನ್ನು ತಂದೆಯೊಂದಿಗಿನ ಸುವಾರ್ತೆಯಲ್ಲಿ ಇಡುತ್ತದೆ ಮತ್ತು ಆತನನ್ನು ಇತರ ಎಲ್ಲಾ ಅಧಿಕಾರಗಳಿಂದಲೂ ಮಿಗಿಲಾಗಿ ಇರಿಸುತ್ತದೆ. ಕ್ರಿಸ್ತ ಸ್ವಯಂಪ್ರೇರಿತ ಅಪಮಾನದ ಆಳವನ್ನು ಎದ್ದು ಕಾಣುವ ಹಾಗೇ ಚಿತ್ರಿಸಲು ಪೌಲನು ಇದನ್ನು ಒತ್ತಿ ಹೇಳಿದ್ದಾನೆ"– ಸಂಪುಟ 7, ಪುಟ 154. ಆತನ ನಿತ್ಯಸ್ವಭಾವದ ಬಗ್ಗೆ ಮಾತನಾಡುತ್ತಾ, ಎಲೆನ್ ಜಿ ವೈಟ್‌ರವರು, "ಕ್ರಿಸ್ತನಲ್ಲಿ ಜೀವನ, ಮೂಲ ಭೂತವಾಗಿದೆ, ಎರವಲು ಪಡೆದಿಲ್ಲ, ಉತ್ಪತ್ತಿಯಾಗಿಲ್ಲ" ಎಂದು ಸೇರಿಸುತ್ತಾರೆ– ದಿ ಡಿಸೈರ್ ಆಫ್ ಏಜಸ್, ಪುಟ 530.

ಯುಗಯುಗಾಂತರಗಳಿಂದಲೂ ದೇವರೊಂದಿಗೆ ಸರಿಸಮಾನನಾಗಿದ್ದ ಯೇಸು, "ತನ್ನನ್ನು ಬರಿದು ಮಾಡಿಕೊಂಡನು" (ಫಿಲಿಪ್ಪಿ 2:7). ಇದು ಸಹ ಆಕರ್ಷಕ ಗ್ರೀಕ್ ಭಾವವಾಗಿದೆ. ಇದನ್ನು ಅಕ್ಷರಶಃ "ಬರಿದು ಮಾಡಿಕೊಂಡ" ಎಂದು ಅನುವಾದಿಸಬಹುದು. ಯೇಸು ಸ್ವಯಂ ಪ್ರೇರಣೆಯಿಂದ ಮಾನವ ಸ್ವರೂಪವನ್ನು ಪಡೆದುಕೊಳ್ಳಲು ಮತ್ತು ಮನುಕುಲಕ್ಕಾಗಿ ತಗ್ಗಿದ ದಾಸನಾಗಲು ದೇವರಿಗೆ ಸರಿಸಮಾನವಾದಂತ ತನ್ನ ಸೌಕರ್ಯಗಳನ್ನು ಮತ್ತು ವಿಶೇಷಾಧಿಕಾರಿಗಳನ್ನು "ಸ್ವತಃ ತಾನೇ ಬರಿದು ಮಾಡಿಕೊಂಡನು". ಒಬ್ಬ ದಾಸನಾಗಿ, ಆತನು ಇಡೀ

ವಿಶ್ವಕ್ಕೆ ಪರಲೋಕ ಪ್ರೀತಿಯ ನಿಯಮವನ್ನು ಪ್ರಕಟಿಸಿದನು ಮತ್ತು ಅಂತಿಮವಾಗಿ, ಶಿಲುಬೆಯ ಮೇಲೆ ಪ್ರೀತಿಯ ಕೊನೆಯ ಕಾರ್ಯವನ್ನು ತೋರ್ಪಡಿಸಿದನು. ನಮ್ಮನ್ನು ಶಾಶ್ವತವಾಗಿ ರಕ್ಷಿಸಲು ಆತನು ತನ್ನ ಪ್ರಾಣವನ್ನು ಕೊಟ್ಟನು.

ಯೇಸುವಿನ ಆಲೋಚನೆಯ ಮಾಲಿಕತ್ವವೆಂದರೆ ಸ್ವಯಂ ತ್ಯಾಗದ ಪ್ರೀತಿ. ಯೇಸುವನ್ನು ಹಿಂಬಾಲಿಸುವುದು ಎಂದರೆ ಆತನು ಪ್ರೀತಿಸಿದಂತೆ ನಾವು ಪ್ರೀತಿಸುವುದು, ಆತನ ಸೇವೆ ಮಾಡಿದಂತೆಯೇ ಸೇವೆ ಮಾಡುವುದು ಮತ್ತು ಆತನು ನಿರ್ವಹಿಸಿದಂತೆಯೇ ನಿರ್ವಹಿಸುವುದು. ಸ್ವಾರ್ಥ ಮಹತ್ವಾಕಾಂಕ್ಷೆಯಿಂದ ನಮ್ಮನ್ನು ಬರಿದು ಮಾಡಿಕೊಳ್ಳುವುದಕ್ಕೆ ಆತನ ಪವಿತ್ರಾತ್ಮನ ಮೂಲಕ ಯೇಸುವನ್ನು ಅನುಮತಿಸುವುದು ನಮಗೇನಾದರೂ ನಷ್ಟವಾಗುತ್ತದೆಯೇ. ಅದು ಯೇಸುವಿಗೆ ಎಲ್ಲವನ್ನೂ ನಷ್ಟಮಾಡಿದೆ. ಆದರೆ, "ಈ ಕಾರಣದಿಂದಾಗಿ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ" (ಫಿಲಿಪ್ಪಿ 2:9) ಎಂದು ಧರ್ಮಗ್ರಂಥವು ಯೇಸುವಿನ ಬಗ್ಗೆ ಹೇಳುತ್ತದೆ.

ನಾವು ಭೂಮಿಯ ಮೇಲೆ ಮಾಡುವ ಯಾವುದೇ ತ್ಯಾಗಕ್ಕೂ ಪರಲೋಕವು ಯೋಗ್ಯವಾಗಿರುತ್ತದೆ. ಮಾರ್ಗದುದ್ದಕ್ಕೂ ತ್ಯಾಗಗಳು ಇರುತ್ತವೆ, ಆದರೆ ಸೇವೆಯ ಆನಂದವು ಇಂದು ಅವುಗಳನ್ನು ಮೀರಿಸುತ್ತದೆ ಮತ್ತು ಯುಗಯುಗಾಂತರದವರೆಗೂ ಕ್ರಿಸ್ತನೊಂದಿಗೆ ಜೀವಿಸುತ್ತ ನಿತ್ಯ ಸಂತೋಷಕ್ಕೆ ನಾವು ಇಲ್ಲಿ ಮಾಡುವ ಯಾವುದೇ ತ್ಯಾಗವು ಅತ್ಯಲ್ಪವೆಂದು ತೋರುತ್ತದೆ.

ಕ್ರಿಸ್ತನ ನಿಮಿತ್ತವಾಗಿಯೂ ನಿಮ್ಮ ಆತ್ಮಕ್ಕಾಗಿಯೂ ಕೊನೆಯ ಬಾರಿಗೆ ನಿಜವಾಗಿಯೂ ಯಾವಾಗ ಸತ್ತಿದ್ದೀರಿ? ನಿಮ್ಮ ಕ್ರೈಸ್ತೀಯ ನಡಿಗೆಯ ಬಗ್ಗೆ ನಿಮ್ಮ ಉತ್ತರ ನಿಮಗೆ ಏನು ಹೇಳುತ್ತದೆ?

**ಸೋಮವಾರ** **ಸೆಪ್ಟೆಂಬರ್ 21**

## ಬದ್ಧತೆಯ ಕರೆ

ನೀವು ಪೇತ್ರ ಹಾಗೂ ಯೋಹಾನರು ಎಂದು ಊಹಿಸಿಕೊಳ್ಳಿ. ಸುಂದರವಾದ ಗಲಿಲಾಯದ ಬೆಳಗ್ಗೆಯಲ್ಲಿ ಈಗ ತಾನೇ ಸೂರ್ಯ ಉದಯಿಸಿದ್ದು, ರಾತ್ರಿ

ಗಾಳಿಯ ಚಳಿಯನ್ನು ಓಡಿಸಿದ್ದಾನೆ. ನಿಮ್ಮ ಆಲೋಚನೆಗಳು ಒಂದು ವಿಷಯದ ಮೇಲೆ ಇರುತ್ತದೆ; ಬಹಳಷ್ಟು ಮೀನುಗಳನ್ನು ಹಿಡಿಯಬೇಕು. ಮೀನುಗಾರಿಕೆ ಇತ್ತೀಚೆಗೆ ಉತ್ತಮವಾಗಿದೆ, ಮತ್ತು ನೀವು ಮತ್ತೊಂದು ದಿನದ ದೊಡ್ಡ ಮೀನುಗಾರಿಕೆಯನ್ನು ಎದುರು ನೋಡುತ್ತಿದ್ದೀರಿ. ನಂತರ ಮುಂಜಾನೆಯ ಬೆಳಕಿನಲ್ಲಿ ನಜರೇತಿನ ಯೇಸು ನಿಮ್ಮ ಕಡೆಗೆ ಬರುತ್ತಿರುವುದನ್ನು ಕಾಣುವಿರಿ. ಕೆಲವೇ ಕ್ಷಣಗಳಲ್ಲಿ ನಿಮ್ಮ ಇಡೀ ಜೀವನವೇ ಬದಲಾಗುತ್ತದೆ ಎಂದು ನಿಮಗೆ ಸ್ವಲ್ಪವು ತಿಳಿದಿಲ್ಲ. ನೀವು ಮತ್ತೆ ಎಂದಿಗೂ ಅದೇ ರೀತಿ ಇರುವುದಿಲ್ಲ.

ಮತ್ತಾಯ 4:18–20 ಓದಿರಿ. ಕ್ರಿಸ್ತನನ್ನು ಹಿಂಬಾಲಿಸಲು ಪೇತ್ರ ಮತ್ತು ಯೋಹಾನರು ಮಹತ್ವ ಸಿದ್ಧತೆಯನ್ನು ಮಾಡಲು ಮನಸ್ಸು ಮಾಡಿದ್ದಾರೆ ಎಂದು ನೀವು ಏಕೆ ಆಲೋಚಿಸುತ್ತೀರಿ? ಮೀನು ಹಿಡಿಯುವುದಕ್ಕಿಂತ ಉನ್ನತ ಉದ್ದೇಶಕ್ಕಾಗಿ ಯೇಸು ಅವರನ್ನು ಕರೆಯುತ್ತಿದ್ದಾನೆ ಎನ್ನುವುದು ಈ ವಾಕ್ಯದಲ್ಲಿ ಏನನ್ನು ಸೂಚಿಸುತ್ತದೆ?

ಈಗಾಗಲೇ ಈ ಮನುಷ್ಯರು ಒಂದು ವರ್ಷಕ್ಕೂ ಹೆಚ್ಚಿನ ಕಾಲದಿಂದಲೂ ಯೇಸುವಿನ ಬಗ್ಗೆ ಸ್ವಲ್ಪ ತಿಳಿದುಕೊಂಡಿದ್ದರು, ಆದರೂ ಆತನಿಗೆ ಸಂಪೂರ್ಣವಾಗಿ ಒಪ್ಪಿಸಿಕೊಟ್ಟಿರಲಿಲ್ಲ ಎಂದು ಯೋಹಾನನ ಸುವಾರ್ತೆಯಿಂದ ನಾವು ತಿಳಿದುಕೊಳ್ಳುತ್ತೇವೆ. ಈ ಗಲಿಲಾಯದ ಮೀನುಗಾರರನ್ನು ಆತನು ದೈವೀಕ ಕರೆಗೆ ಆಹ್ವಾನಿಸುತ್ತಿದ್ದಾನೆಂದರೆ, ಕ್ರಿಸ್ತನ ಬಗ್ಗೆ ದೈವಿಕ ನಡತೆಯನ್ನು ಹೊಂದಿರಲೇಬೇಕೆಂದು ಆತನ ಯಾವುದೋ ಒಂದು ನೋಟ, ಮಾತುಗಳು ಮತ್ತು ಕ್ರಿಯೆಗಳು ಸೂಚಿಸುತ್ತವೆ. ಆತನನ್ನು ಹಿಂಬಾಲಿಸಲು ಅವರು ತಮ್ಮ ದೋಣಿಗಳು, ಉದ್ಯೋಗ, ಮತ್ತು ಪರಿಚಿತ ಪರಿಸರವನ್ನು ತ್ಯಜಿಸಲು ಕಾರಣವೇನೆಂದರೆ ಅವರು ಉನ್ನತ ಉದ್ದೇಶದ ಕರೆಯನ್ನು ಗ್ರಹಿಸಿದ್ದರು. ಈ ಸಾಧಾರಣ ಮೀನುಗಾರರು ತಮ್ಮನ್ನು ಅಸಾಧಾರಣ ಉದ್ದೇಶಕ್ಕಾಗಿ ಕರೆಯಲಾಗಿದೆ ಎಂದು ಒಪ್ಪಿಕೊಂಡರು. ಇಂದು ನಿಮ್ಮ ವೃತ್ತಿಯನ್ನು ಬಿಡಲು ದೇವರು ನಿಮ್ಮನ್ನು ಕರೆಯದಿರಬಹುದು, ಆದರೆ ಆತನ ನಾಮದ ಮಹಿಮೆಗಾಗಿ ಆತನ ಪ್ರೀತಿ ಮತ್ತು ಆತನ ಸತ್ಯದ ಸಾಕ್ಷಿಯನ್ನು ಹಂಚಿಕೊಳ್ಳುವ ಅದ್ಭುತವಾದ ಉದ್ದೇಶಕ್ಕಾಗಿ ಆತನು ನಿಮ್ಮನ್ನು ಕರೆಯುತ್ತಿದ್ದಾನೆ.

ಮತ್ತಾಯ 9:9ರಲ್ಲಿ ಸುಂಕದ ಗುತ್ತಿಗೆದಾರನಾದ ಮತ್ತಾಯನ ಕರೆಯನ್ನು ಪರಿಗಣಿಸಿ. ಈ ವಾಕ್ಯ ಭಾಗದಲ್ಲಿ ಸಾಕಷ್ಟು ಗಮನಾರ್ಹವಾದ ಯಾವುದನ್ನು ನೀವು ಕಾಣುವಿರಿ?

ರೋಮನ್ ಜಗತ್ತಿನಲ್ಲಿ ಸುಂಕದ ಗುತ್ತಿಗೆದಾರರು ಸಾಮಾನ್ಯವಾಗಿ ಸುಲಿಗೆ ಮಾಡುವವರಾಗಿದ್ದರೂ, ಸಾಮಾನ್ಯ ಜನರ ಮೇಲೆ ದಬ್ಬಾಳಿಕೆ ನಡೆಸುವುದಕ್ಕೆ ಅವರು ತಮ್ಮದೆ ಅಧಿಕೃತ ಅಧಿಕಾರವನ್ನು ಬಳಸಿಕೊಳ್ಳುತ್ತಿದ್ದರು. ಇಸ್ರಾಯೇಲಿನ ಎಲ್ಲೆಡೆಯಲ್ಲಿಯೂ ಅವರು ತುಂಬಾ ದ್ವೇಷಿಸಲ್ಪಟ್ಟ ಮತ್ತು ತಿರಸ್ಕರಿಸಲ್ಪಟ್ಟ ವ್ಯಕ್ತಿಗಳಾಗಿದ್ದರು. "ನನ್ನನ್ನು ಹಿಂಬಾಲಿಸು" ಎಂಬ ಕ್ರಿಸ್ತನ ಆಹ್ವಾನವು, ಮತ್ತಾಯನು ಯೇಸುವಿನ ಬಗ್ಗೆ ಕೇಳಿಸಿಕೊಂಡಿದ್ದಾನೆಂದು ಮತ್ತು ಅವನ ಹೃದಯದಲ್ಲಿ ಆತನನ್ನು ಹಿಂಬಾಲಿಸುವ ಹಂಬಲವಿದೆ ಎಂದು ಗ್ರಹಿಕೆ ಮಾಡಿಕೊಳ್ಳಬೇಕು. ಆಹ್ವಾನ ಬಂದಾಗ, ಅವನು ಸಿದ್ಧನಾಗಿದ್ದನು. ಕ್ರಿಸ್ತನು ಅವನನ್ನು ಅಂಗೀಕರಿಸಿ ತನ್ನ ಶಿಷ್ಯರಲ್ಲಿ ಒಬ್ಬನಾಗಲು ಆಹ್ವಾನಿಸಿದಕ್ಕೆ ಅವನು ಆಶ್ಚರ್ಯಪಟ್ಟನು.

ಜೀವನದಲ್ಲಿ ಯಾವುದಾದರೂ ಹೆಚ್ಚಿನದ್ದಕ್ಕಾಗಿ ನಮ್ಮೆಲ್ಲರ ಹೃದಯಾಂತರಾಳದಲ್ಲಿ ಹಾತೊರೆಯುತ್ತೇವೆ. ನಾವು ಕೂಡ ಒಂದು ಉಪಯುಕ್ತವಾದ, ಶ್ರೇಷ್ಠ ಉದ್ದೇಶಕ್ಕಾಗಿ ಬದುಕಲು ಬಯಸುತ್ತೇವೆ. ಆದ್ದರಿಂದ ಕ್ರಿಸ್ತನು ನಮ್ಮನ್ನು ಮತ್ತಾಯನಂತೆ ಹಿಂಬಾಲಿಸಲು ಕರೆಯುತ್ತಾನೆ.

ಯೇಸುವನ್ನು ಹಿಂಬಾಲಿಸಲು ಜನರು ಏನನ್ನು ಬಿಟ್ಟುಕೊಡಬೇಕಾಯಿತು ಎಂಬುದರ ಬಗ್ಗೆ ಆಲೋಚಿಸಿ ಕೊನೆಯಲ್ಲಿ, ಅದು ಯಾವಾಗಲೂ ಲಾಭದಾಯಕ ವಾಗಿರುತ್ತದೆ ಯಾಕೆ?

**ಮಂಗಳವಾರ** **ಸೆಪ್ಟೆಂಬರ್ 22**

## ಪೌಲ : ದೇವರು ಆರಿಸಿಕೊಂಡ ಪಾತ್ರೆ

ಪೌಲನು ಕ್ರಿಸ್ತನನ್ನು ಅಂಗೀಕರಿಸಿಕೊಂಡಾಗ, ಆತನ ಇಡೀ ಜೀವನವು ಪೂರ್ಣವಾಗಿ ಬದಲಾಯಿತು. ಕ್ರಿಸ್ತನು ಅವನಿಗೆ ಸಂಪೂರ್ಣವಾಗಿ ಹೊಸ ಭವಿಷ್ಯವನ್ನು ಕೊಟ್ಟನು. ಆತನು ಅವನನ್ನು ತನ್ನ ಸುರಕ್ಷಿತ ಪರಿಸ್ಥಿತಿಯಿಂದ ಊಹಿಸಲು ಅಸಾಧ್ಯವಾದ ಅನುಭವಗಳಿಗೆ ಮುನ್ನಡೆಸಿದನು. ಪವಿತ್ರಾತ್ಮನ

ಮಾರ್ಗದರ್ಶನದ ಮೂಲಕ, ಅಪೊಸ್ತಲನಾದ ಪೌಲನು ದೇವರ ವಾಕ್ಯವನ್ನು ಮೆಡಿಟರೇನಿಯನ್ ಲೋಕದಾದ್ಯಂತ ಸಾವಿರಾರು ಜನರಿಗೆ ಸಾರಿದನು. ಅವನ ಸಾಕ್ಷಿಯು ಕ್ರೈಸ್ತಧರ್ಮ ಮತ್ತು ಪ್ರಪಂಚದ ಇತಿಹಾಸವನ್ನು ಬದಲಾಯಿಸಿತು.

ಅಪೊಸ್ತಲ 9:3–6, 10–20 ಓದಿರಿ. ಪೌಲನ ಜೀವನಕ್ಕಾಗಿ ಯೇಸು ದೈವಿಕ ಉದ್ದೇಶವನ್ನು ಹೊಂದಿದ್ದನು ಎಂದು ಈ ವಚನಗಳು ಹೇಗೆ ಬಹಿರಂಗಪಡಿಸುತ್ತದೆ? ಯೇಸು ತನ್ನ ನಾಮಕ್ಕೆ ಸಾಕ್ಷಿಯಾಗಲು ಅಸಂಭವನೀಯ ಅಭ್ಯರ್ಥಿಗಳನ್ನು ಆಗಾಗ್ಗೆ ಆರಿಸಿಕೊಳ್ಳುತ್ತಾನೆ. ದೆವ್ವ ಹಿಡಿದವ, ಸಮಾರ್ಯದ ಸ್ತ್ರೀ, ವೇಶ್ಯೆ, ಸುಂಕದ ಗುತ್ತಿಗೆದಾರ, ಗಲಿಲಾಯದ ಮೀನುಗಾರರು ಮತ್ತು ಈಗ ಕ್ರೈಸ್ತಧರ್ಮದ ಉಗ್ರ ಕಿರುಕುಳಗಾರ, ಇವರ ಬಗ್ಗೆ ಆಲೋಚಿಸಿ. ಇವರೆಲ್ಲರೂ ಕೃಪೆಯಿಂದ ಬದಲಾಯಿಸಲ್ಪಟ್ಟ ನಂತರ ಅವರ ಜೀವಿತಗಳಲ್ಲಿ ಏನು ಮಾಡಿದ್ದಾನೆಂಬ ಕಥೆಯನ್ನು ಹೇಳುವುದಕ್ಕೆ ತುಂಬು ಹೃದಯದಿಂದ ಕಳುಹಿಸಲ್ಪಟ್ಟರು. ಕ್ರಿಸ್ತನು ಅವರಿಗಾಗಿ ಮಾಡಿದ್ದು ತುಂಬಾ ಅದ್ಭುತವಾಗಿತ್ತು; ಅದನ್ನು ಹಂಚಿಕೊಳ್ಳಬೇಕಾಗಿತ್ತು. ಅವರು ಮೌನವಾಗಿರಲು ಸಾಧ್ಯವಾಗಲಿಲ್ಲ.

ಅಪೊಸ್ತಲ 28:28–31 ಮತ್ತು 2 ತಿಮೊಥೆ 4:5–8 ಹೋಲಿಸಿ. ಆತ್ಮವನ್ನು ಗೆಲ್ಲುವ ಸೇವೆಯಲ್ಲಿ ಪೌಲನು ತನ್ನ ಇಡೀ ಜೀವನವನ್ನೇ ಕ್ರಿಸ್ತನಿಗೆ ನೀಡುವ ತನ್ನ ಬದ್ಧತೆಯಲ್ಲಿ ಎಂದಿಗೂ ಅಲುಗಾಡಲಿಲ್ಲವೆಂಬುದಕ್ಕೆ ಈ ವಚನಗಳಲ್ಲಿ ಯಾವ ಸೂಚನೆಗಳನ್ನು ನಾವು ಹೊಂದಿದ್ದೇವೆ?

ಅವನ ಜೀವನದ ಅಂತ್ಯದಲ್ಲಿ ರೋಮ್‌ನಲ್ಲಿ ಗೃಹಬಂಧಕ್ಕೊಳಗಾಗಿದ್ದ ಸಮಯದಲ್ಲಿ, "ದೇವರಿಂದಾದ ರಕ್ಷಣೆಯು ಅನ್ಯಜನರಿಗೆ ಕಳುಹಿಸಲ್ಪಟ್ಟಿದೆ, ಮತ್ತು ಅವರಾದರೂ ಕೇಳುವರು!" (ಅಪೋ 28:28) ಎಂದು ಪೌಲನು ದೃಢೀಕರಿಸಿದನು. ಅವನು ತನ್ನ ಬಳಿಗೆ ಬಂದವರನ್ನೆಲ್ಲಾ ಸೇರಿಸಿಕೊಂಡನು ಮತ್ತು ಅವರಿಗೆ ವಾಕ್ಯವನ್ನು ಸಾರಿದನು (ಅಪೋ 28:30, 31) ಎಂದು ದಾಖಲೆಯು ಹೇಳುತ್ತದೆ. ಅವನ ಜೀವನದ ಕೊನೆಯಲ್ಲಿ, ತಿಮೊಥೆಯನ್ನು ಸುವಾರ್ತಾ ಬೋಧಕನಾಗಿ ಕೆಲಸ ಮಾಡುವಂತೆ ವಿನಂತಿಸಿಕೊಂಡನು ಮತ್ತು ಪೌಲನು "ಶ್ರೇಷ್ಠ ಹೋರಾಟವನ್ನು ಮಾಡಿದ್ದೇನೆ, ನನ್ನ ಓಟವನ್ನು ಕಡೆಗಾಣಿಸಿದ್ದೇನೆ, ಕ್ರಿಸ್ತನಂಬಿಕೆಯನ್ನು

ಕಾಪಾಡಿಕೊಂಡಿದ್ದೇನೆ" 2 ತಿಮೊಥೆ 4:7 ಎಂದು ಸ್ವತಃ ತನಗೆ ಹೇಳಿಕೊಳ್ಳುವುದಕ್ಕೆ ಸಾಧ್ಯವಾಯಿತು.

ಪೌಲನಂತೆ ನಮ್ಮ ಕರೆಯು ನಾಟಕೀಯವಾಗಿಲ್ಲದಿದ್ದರೂ, ದೇವರು ಜಗತ್ತನ್ನು ಬದಲಾಯಿಸುವ ತನ್ನ ಕೆಲಸದಲ್ಲಿ ತನ್ನೊಂದಿಗೆ ಪಾಲ್ಗೊಳ್ಳುವಂತೆ ನಮ್ಮಲ್ಲಿ ಪ್ರತಿಯೊಬ್ಬರನ್ನು ಕರೆಯುತ್ತಿದ್ದಾನೆ. ವರ್ಷಗಳಿಂದಲೂ ಆತನು ಎದುರಿಸಿದ ಎಲ್ಲಾ ಸಂಕಷ್ಟಗಳ ಹೊರತಾಗಿಯೂ (2 ಕೊರಿಂಥ 11:25–30 ನೋಡಿ), ಕರ್ತನಲ್ಲಿ ಬಂದ ತನ್ನ ಕರೆಗೆ ಪೌಲನು ನಂಬಿಗಸ್ತನಾಗಿ ಉಳಿದನು. ಯೇಸುವಿನ ಅನುಯಾಯಿಗಳ ಮಾಜಿ ಕಿರುಕುಳಗಾರನು ಹೇಗೆ ಕ್ರೈಸ್ತರ ನಂಬಿಕೆಯ (ಯೇಸುವನ್ನು ಹೊರತುಪಡಿಸುವವರೊಂದಿಗೆ) ಪ್ರತಿಷ್ಠಿತ ಪ್ರಭಾವವುಳ್ಳ ಮತ್ತು ಸಾಂದರ್ಭಿಕ ನ್ಯಾಯವಾದಿಯಾದ ಕಥೆಯು ಕರ್ತನ ಕೆಲಸಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಡುವ ವ್ಯಕ್ತಿಗಳ ಮೂಲಕ ದೇವರು ಏನು ಮಾಡಬಹುದು ಎಂಬುದಕ್ಕೆ ದೊಡ್ಡ ನಿದರ್ಶನವಾಗಿ ಉಳಿದಿದೆ.

ದೇವರು ನಿಮ್ಮನ್ನು ಏನು ಮಾಡಲು ಕರೆದಿದ್ದಾನೆ? ನೀವು ಅದನ್ನು ಮಾಡುತ್ತಿದ್ದೀರಾ?

**ಬುಧವಾರ** **ಸೆಪ್ಟೆಂಬರ್ 23**

## ಪ್ರೀತಿಯ ಬೇಡಿಕೆಗಳು

ಪ್ರೀತಿ ಯಾವಾಗಲೂ ಕ್ರಿಯೆಯಲ್ಲಿ ಪ್ರಕಟವಾಗುತ್ತದೆ. ಕ್ರಿಸ್ತನ ಮೇಲಣ ನಮ್ಮ ಪ್ರೀತಿಯು ಕಳೆದುಹೋದ ಮನುಕುಲಕ್ಕೆ ಏನಾದರೂ ಮಾಡಬೇಕೆಂದು ನಮ್ಮನ್ನು ಒತ್ತಾಯಿಸುತ್ತದೆ. ಪೌಲನು ಕೊರಿಂಥದಲ್ಲಿರುವ ಸಭೆಗೆ, "ಕ್ರಿಸ್ತನ ಪ್ರೀತಿಯು ನಮಗೆ ಒತ್ತಾಯ ಮಾಡುತ್ತದೆ" (2 ಕೊರಿಂಥ 5:14) ಎಂದು ಹೇಳುವಾಗ ಅದನ್ನು ಸ್ಪಷ್ಟಪಡಿಸಿದನು. ನಾವು ರಕ್ಷಿಸಲ್ಪಡುತ್ತೇವೆ ಎಂಬ ಕಾರಣಕ್ಕೆ ಕ್ರೈಸ್ತ ಧರ್ಮವು ಪ್ರಧಾನವಾಗಿ ಕಟ್ಟಿದ್ದನ್ನು ಬಿಟ್ಟುಬಿಡುವುದಿಲ್ಲ. ಆತನು ರಕ್ಷಿಸಬಹುದೆಂಬ ಕಾರಣಕ್ಕಾಗಿ ಪರಲೋಕದಲ್ಲಿ ಕೆಟ್ಟದ್ದನ್ನು ಯೇಸು "ಅವಕಾಶ ಮಾಡಿಕೊಡಲಿಲ್ಲ" ಇತರರನ್ನು ರಕ್ಷಿಸಬಹುದೆಂಬ ಕಾರಣಕ್ಕಾಗಿ ಆತನು ಒಳ್ಳೆಯದ್ದನ್ನು ಬಿಟ್ಟುಕೊಟ್ಟನು. ತನ್ನ ಧ್ಯೇಯಕ್ಕಾಗಿ ಕೇವಲ ನಮ್ಮ ಸಮಯ, ಪ್ರತಿಭೆ ಮತ್ತು ಅಮೂಲ್ಯ ವಸ್ತುಗಳನ್ನು

ನೀಡಲು ಆಹ್ವಾನಿಸುತ್ತಿಲ್ಲ; ಆತನು ನಮಗೆ ಬದುಕನ್ನು ನೀಡಲು ನಮ್ಮನ್ನು ಆಹ್ವಾನಿಸುತ್ತಿದ್ದಾನೆ.

ಗಲಿಲಾಯ ತೀರದಲ್ಲಿ ಶಿಷ್ಯರೊಂದಿಗೆ ನಡೆಸಿದ ಮುಂಜಾನೆಯ ಸಭೆಯಲ್ಲಿ ಯೇಸು ದೈವಿಕ ಪ್ರೀತಿಯ ಬೇಡಿಕೆಗಳನ್ನು ಅದ್ಭುತವಾಗಿ ವಿವರಿಸಿದ್ದಾನೆ.

ಯೋಹಾನ 2:15–19 ಓದಿರಿ. ಯೇಸು ಪೇತ್ರನಿಗೆ ಮೂರು ಬಾರಿ ಯಾವ ಪ್ರಶ್ನೆಯನ್ನು ಕೇಳಿದನು ಮತ್ತು ಪೇತ್ರನ ಪ್ರತಿಕ್ರಿಯೆ ಏನಾಗಿತ್ತು? ಈ ನಿರ್ದಿಷ್ಟ ಪ್ರಶ್ನೆಯನ್ನು ಯೇಸು ಪೇತ್ರನಿಗೆ ಮೂರು ಸಾರಿ ಯಾಕೆ ಕೇಳಿದನು?

ಪೇತ್ರನು ತನ್ನ ಕರ್ತನನ್ನು ಮೂರು ಸಾರಿ ಬೊರಿಕಿದನು, ಮತ್ತು ಯೇಸು ಪೇತ್ರನ ಸ್ವಂತ ತುಟಿಗಳಿಂದ ಮೂರು ಸಾರಿ ಪ್ರೀತಿಯ ಪ್ರತಿಕ್ರಿಯೆಯನ್ನು ಪಡೆದನು. ಶಿಷ್ಯರ ಸಮ್ಮುಖದಲ್ಲಿ, ಯೇಸು ಪೇತ್ರನನ್ನು ದೈವೀಕ ಪ್ರೀತಿಯಿಂದ ಕ್ಷಮಿಸಿ, ಅವನ ಆತ್ಮವಿಶ್ವಾಸವನ್ನು ಪುನಸ್ಥಾಪಿಸಿದನು ಮತ್ತು ಆತನ ಉದ್ದೇಶವನ್ನು ಪೂರ್ಣಗೊಳಿಸಲು ಯೇಸು ಇನ್ನೂ ಅವನಲ್ಲಿ ಕಾರ್ಯ ನಡೆಸಬೇಕಾಗಿತ್ತು.

ಯೋಹಾನ 21:15–19 ಮತ್ತೊಮ್ಮೆ ಓದಿರಿ. ಈ ಸಮಯದಲ್ಲಿ ವಿಶೇಷವಾಗಿ, ಕ್ರಿಸ್ತನ ಮೇಲಣ ಪ್ರೀತಿಯನ್ನು ಪೇತ್ರನು ದೃಢಪಡಿಸಿದ ಬಗ್ಗೆ ಯೇಸುವಿನ ಪ್ರತಿಕ್ರಿಯೆಯನ್ನು ಗಮನಿಸಿ. ಪ್ರತಿಕ್ರಿಯೆಯಾಗಿ ಯೇಸು ಅವನಿಗೆ ಏನು ಮಾಡಲು ಹೇಳಿದನು?

ದೈವೀಕ ಪ್ರೀತಿಯು ಸಕ್ರಿಯವಾಗಿದೆ ನಿಷ್ಕ್ರಿಯವಾಗಿಲ್ಲ, ನಿಜವಾದ ಪ್ರೀತಿಯು ಆಹ್ಲಾದಕರ ಭಾವನೆಗಿಂತ ಉತ್ತಮ ಕಲ್ಪನೆಗಿಂತ ಮಿಗಿಲಾಗಿದೆ. ಅದು ವಚನ ಬದ್ಧತೆಯನ್ನು ಒಳಗೊಂಡಿರುತ್ತದೆ. ಪ್ರೀತಿಯು ನಮ್ಮನ್ನು ಕಾರ್ಯನಿರತರಾಗಲು ಒತ್ತಾಯಿಸುತ್ತದೆ. ಯಾವುದೇ ಭರವಸೆ ಇಲ್ಲದ ದೇವರ ಮಕ್ಕಳ ಕಳೆದುಹೋದ ಜಗತ್ತಿಗೆ ತಲುಪಲು ಅದು ನಮ್ಮನ್ನು ಕರೆದೊಯ್ಯುತ್ತದೆ. "ನನ್ನ ಕುರಿಗಳನ್ನು ಮೇಯಿಸು" ಎಂದು ಯೇಸು ಪೇತ್ರನಿಗೆ ಹೇಳುವಾಗ, ಅದು ಆದೇಶ ಮತ್ತು ಮರುಭರವಸೆಯ ಸಾಂತ್ವನವಾಗಿತ್ತು. ಯೇಸುವನ್ನು ಬಂಧಿಸಿದಾಗ, ಪೇತ್ರನು ನಿಜವಾಗಿಯೂ ನಾಚಿಕೆಗೇಡಿತನದ ಕೆಲಸ ಮಾಡಿದರೂ ಸಹ, ಪ್ರೀತಿಗೆ

ಪ್ರತಿಕ್ರಿಯಿಸುವುದಕ್ಕಾಗಿ ಗುರುವು ಕರೆ ನೀಡಿದನು ಮತ್ತು ಆತನು ಅವನಲ್ಲಿ ಇನ್ನೂ ಕಾರ್ಯ ಮಾಡುವ ಅಗತ್ಯವಿದ್ದ ಕಾರಣದಿಂದ ಆತನು ಪೇತ್ರನನ್ನು ಪ್ರೋತ್ಸಾಹಿಸಿದನು. ಕ್ರಿಸ್ತನು ಅಂದು ಅವನಿಗೆ ಹೇಳಿದಂತೆಯೇ, ಪೇತ್ರನು ಯೇಸುವನ್ನು ತಿಳಿದಿಲ್ಲವೆಂದು ಮಾತ್ರ ಬಂಕಲಿಲ್ಲ. ಆದರೆ ಶಾಪಗಳೊಂದಿಗೆ ಬಂಕಿದನು.

ವಿಷಯವೇಂದರೆ? ನೀವು ತೀವ್ರ ಹತಾಶೆಯಲ್ಲಿ ನಿಮ್ಮ ಕರ್ತನನ್ನು ವಿಫಲಗೊಳಿಸಬಹುದು. ನಿಮ್ಮ ಕ್ರಿಯೆಗಳಿಂದ ಒಂದಕ್ಕಿಂತ ಹೆಚ್ಚು ಬಾರಿ ನೀವು ಆತನನ್ನು ಬಂಕಿರಬಹುದು. ಒಳ್ಳೆಯ ಸುದ್ದಿಯೆಂದರೆ ಕೃಪೆಯು ಇನ್ನೂ ಸಹ ಲಭ್ಯವಿದೆ, ಮತ್ತು ದೇವರು ನಿಮ್ಮೊಂದಿಗೆ ಇನ್ನೂ ಸಾಕಾಗಿಲ್ಲ. ನಿಮಗೆ ಮನಸ್ಸಿದ್ದರೆ ಆತನ ಕೆಲಸದಲ್ಲಿ ಇನ್ನೂ ಸಹ ನಿಮಗಾಗಿ ಒಂದು ಸ್ಥಾನವಿದೆ.

ಪೇತ್ರನಂತೆ, ನೀವು ಎಂದಾದರೂ ಕರ್ತನನ್ನು ಬಂಕಿದ್ದೀರಾ? ಹಾಗಿದ್ದಲ್ಲಿ ಪೇತ್ರನ ನಿರಾಕರಣೆ ಮಾತ್ರವಲ್ಲದೆ ಈ ಕಥೆಯಲ್ಲಿ ಕ್ರಿಸ್ತನು ಪೇತ್ರನಿಗೆ ಹೇಳಿದ ಮಾತುಗಳು, ನಿಮಗೇನು ಹೇಳುತ್ತದೆ?

**ಗುರುವಾರ** **ಸೆಪ್ಟೆಂಬರ್ 24**

## ಪ್ರೀತಿಯ ಬದ್ಧತೆ

ಯೇಸು ಮತ್ತು ಪೇತ್ರನ ನಡುವಿನ ಸಂಭಾಷಣೆಯ ಅಂತ್ಯದಲ್ಲಿ, ಇಬ್ಬರು ಮನುಷ್ಯರು ಸಮುದ್ರ ತೀರದಲ್ಲಿ ಹೋಗುವುದನ್ನು ನಾವು ಕಾಣುತ್ತೇವೆ. ಅಲೆಗಳು ತೀರಕ್ಕೆ ಬಂದು ಬಡಿಯುತ್ತಿದ್ದಂತೆ, ಯೇಸು ಪೇತ್ರನಿಗೆ ಶಿಷ್ಯತ್ವದ ಮೌಲ್ಯದ ಬಗ್ಗೆ ಹೇಳುತ್ತಾನೆ. "ನನ್ನ ಕುರಿಗಳನ್ನು ಮೇಯಿಸು" ಎಂಬ ಯೇಸುವಿನ ಆಹ್ವಾನವನ್ನು ಅಂಗೀಕರಿಸಿದರೆ, ಪೇತ್ರನು ತಾನು ಎದುರಿಸಬೇಕಾದದ್ದನ್ನು ಸ್ಪಷ್ಟವಾಗಿ ಅರಿತುಕೊಳ್ಳಬೇಕೆಂದು ಆತನು ಬಯಸುತ್ತಾನೆ.

ಯೋಹಾನ 21:18,19 ಯೇಸು ಪೇತ್ರನಿಗೆ ಶಿಷ್ಯತ್ವದ ಮೌಲ್ಯವನ್ನು ಕುರಿತು ಏನು ಹೇಳಿದನು? ಯೇಸು ತನ್ನ ಜೀವನದ ಈ ಸಮಯದಲ್ಲಿ ಪೇತ್ರನಿಗೆ ಆಶ್ಚರ್ಯಕರವಾದ ಸಂಗತಿಯನ್ನು ಯಾಕೆ ಪ್ರಕಟಪಡಿಸುತ್ತಿದ್ದಾನೆಂದು ನೀವು ಆಲೋಚಿಸುವಿರಿ?

ಈ ಮಾತುಗಳಲ್ಲಿ ಒಂದು ದಿನ ಪೇತ್ರನು ರಕ್ತಸಾಕ್ಷಿಯಾಗಿ ಸಾಯುವ ಅನುಭವವನ್ನು ಹಾದು ಹೋಗಬೇಕೆಂದು ಕ್ರಿಸ್ತನು ಸೂಚಿಸಿದನು. ಅವನ ಕೈಗಳನ್ನು ಶಿಲುಬೆಯ ಮೇಲೆ ಚಾಚಬೇಕಾಗಿತ್ತು. ಈ ಪ್ರಕಟನೆಯಲ್ಲಿ ಕ್ರಿಸ್ತನು ಪೇತ್ರನಿಗೆ ಆಯ್ಕೆಯನ್ನು ಕೊಟ್ಟನು. ಆತನು ಅವನಿಗೆ ಜೀವನದ ಬಹುದೊಡ್ಡ ಸಂತೋಷವನ್ನು ಕೊಟ್ಟನು. ದೇವರ ರಾಜ್ಯಕ್ಕಾಗಿ ಆತ್ಮಗಳನ್ನು ಗೆಲ್ಲುವುದನ್ನು ನೋಡಿಕೊಳ್ಳಬೇಕಾಗಿತ್ತು. ಪೆಂತೆಕೊಸ್ತಿನ ದಿನದಂದು ಸಾವಿರಾರು ಜನರು ಕ್ರಿಸ್ತನ ಬಳಿಗೆ ಬರುವುದನ್ನು ಅವನು ಕಂಡನು. ಅವನು ಯೇಸುವಿನ ಹೆಸರಿನಲ್ಲಿ ಅದ್ಭುತಗಳನ್ನು ಮಾಡುತ್ತಾನೆ ಮತ್ತು ಸಾವಿರಾರು ಜನರ ಮುಂದೆ ಆತನನ್ನು ಮಹಿಮೆ ಪಡಿಸುತ್ತಾನೆ. ಆತನ ಧರ್ಮ ಪ್ರಚಾರದ ಸೇವೆಯಲ್ಲಿ ಕ್ರಿಸ್ತನೊಂದಿಗಿನ ಒಡನಾಟದ ನಿತ್ಯಸಂತೋಷವನ್ನು ಅವನು ಹೊಂದಿದನು.

ಆದರೆ ಆ ಭಾಗ್ಯ ಕ್ರಯದೊಂದಿಗೆ ಬರುತ್ತದೆ. ಅದು ಬಲಿದಾನವನ್ನು ಕೋರುತ್ತದೆ, ಆದರೆ ಅಂತಿಮ ಬಲಿದಾನ ಪೇತ್ರನು ಸಂಪೂರ್ಣ ಜ್ಞಾನದೊಂದಿಗೆ ಒಳಪಡಲು ಅವನನ್ನು ಕೇಳಲಾಯಿತು. ಜಗತ್ತಿಗೆ ಆತನ ಧರ್ಮ ಪ್ರಚಾರವನ್ನು ಮಾಡುವ ಕಾರ್ಯದಲ್ಲಿ ಯೇಸುವಿನ ಜೊತೆಗೆ ಸೇರಿಕೊಳ್ಳಲು ಯಾವುದೇ ತ್ಯಾಗವು ದೊಡ್ಡದಲ್ಲ ಎಂದು ಪೇತ್ರನಿಗೆ ತಿಳಿದಿತ್ತು.

1 ಯೋಹಾನ 3:16–18 ಓದಿರಿ. ಯೋಹಾನನಿಗೆ, ಪ್ರೀತಿಯು ಅಸ್ಪಷ್ಟ ಭಾವನೆಗಿಂತ ಹೆಚ್ಚು. ಯೋಹಾನನು ಪ್ರೀತಿಯ ಅಂತಿಮ ತ್ಯಾಗವನ್ನು ಹೇಗೆ ವ್ಯಾಖ್ಯಾನಿಸುತ್ತಾನೆ?

ನಾವು ಮಾಡಿದ ಯಾವುದು ನಿತ್ಯತ್ವದಲ್ಲಿ ತ್ಯಾಗದಂತೆ ಕಾಣುವುದಿಲ್ಲ. ನಿಮ್ಮ ಸಮಯ ಮತ್ತು ಶ್ರಮದ ವಿನಿಯೋಗ, ನಮ್ಮ ಜೀವನದ ವಿನಿಯೋಗವು, ಅತಿಯಾದ ಸಮೃದ್ಧಿಯ ಪ್ರತಿಫಲವನ್ನು ಕಾಣುತ್ತದೆ. ಪ್ರೀತಿಯನ್ನು ಕಾರ್ಯರೂಪಕ್ಕೆ ತಿರುಗಿಸಲು, ಅಭಿಪ್ರಾಯಗಳನ್ನು ಬದ್ಧತೆಗೆ ತಿರುಗಿಸಲು ಎಷ್ಟು ಸಂತೋಷವಾಗುತ್ತದೆ. ಅಲ್ಲದೇ ದೈವೀಕ ಪ್ರೀತಿಗೆ ನಾವು ಪ್ರತಿಕ್ರಿಯಿಸಿದಾಗ ಕ್ರಿಸ್ತನ ರಾಯಭಾರಿಗಳಾಗಿ ನಾವು ಇತರರಿಗೆ ಸಾಕ್ಷಿಯಾಗಲು ಪ್ರಯತ್ನಿಸಿದಾಗ ಯಾವುದು ನಮ್ಮನ್ನು ತಡೆಹಿಡಿಯಲು ಸಾಧ್ಯವಿಲ್ಲ, ನಾವು ನಮ್ಮ ಜೀವನದ ಉದ್ದೇಶವನ್ನು ಪೂರೈಸುತ್ತವೆ

ಮತ್ತು ಜೀವನದ ಬಹುದೊಡ್ಡ ಸಂತೋಷವನ್ನು ಅನುಭವಿಸುತ್ತೇವೆ. "ನೀವು ಇದನ್ನು ತಿಳಿದುಕೊಂಡು ಇದರಂತೆ ಮಾಡಿದರೆ ನೀವು ಧನ್ಯರು" (ಯೋಹಾನ 13:17) ಎಂದು ಯೇಸು ಸರಿಯಾಗಿಯೇ ಹೇಳಿದ್ದಾನೆ. ನಾವು ಜೀವಿಸುವ ರೀತಿಯಿಂದ ಮತ್ತು ಲೋಕದೊಂದಿಗೆ ಆತನ ಪ್ರೀತಿ ಮತ್ತು ಸತ್ಯವನ್ನು ಹಂಚಿಕೊಳ್ಳುವ ಮೂಲಕ, ದೇವರನ್ನು ಮಹಿಮೆಪಡಿಸುವ ಮೂಲಕ, ನಾವು ನಮ್ಮ ಅಸ್ತಿತ್ವದ ಅರ್ಥವನ್ನು ನೆರವೇರಿಸಿದಾಗ, ಜೀವನದ ಬಹುದೊಡ್ಡ ಆನಂದ ಮತ್ತು ಶಾಶ್ವತ ಸಂತೋಷ ಬರುತ್ತದೆ.

ಸಮಯವು ಸ್ವಲ್ಪವೇ ಇದೆ ಎಂದು ನಾವೆಲ್ಲರೂ ತಿಳುಕೊಂಡ ಮೇಲೆ ನಿತ್ಯತ್ವದ ಕಲ್ಪನೆಯನ್ನು ಗ್ರಹಿಸಿಕೊಳ್ಳುವುದು ಕಷ್ಟ. ಆದರೆ, ನಾವು ಇಲ್ಲಿ ಹೊಂದಬಹುದಾದ ಎಲ್ಲಕ್ಕಿಂತ ಉತ್ತಮವಾದ ನಿತ್ಯಜೀವವನ್ನು, ನಿತ್ಯತೆಯ ಒಳ್ಳೆಯ ಜೀವನವನ್ನು ಊಹಿಸಿಕೊಳ್ಳಲು ನೀವು ಪ್ರಯತ್ನಿಸಬಹುದು– ಪರಿಣಾಮವಾಗಿ, ಈ ಅಲ್ಪಾವಧಿಯಲ್ಲಿ ಯಾಕೆ ಏನೂ ಇಲ್ಲ, ನಮಗೆ ಯೇಸುವಿನಲ್ಲಿರುವ ನಿತ್ಯಜೀವದ ಭರವಸೆಯನ್ನು ಕಳೆದುಕೊಳ್ಳುವುದು ಯೋಗ್ಯವಾಗಿದೆಯೇ?

**ಶುಕ್ರವಾರ ಸೆಪ್ಟೆಂಬರ್ 25**

**ಹೆಚ್ಚಿನ ಚಿಂತನೆ :** "ಸಭೆಯ ಆಧ್ಯಾತ್ಮಿಕ ಮೇಲ್ವಿಚಾರಣೆಯನ್ನು ಹೊಂದಿರುವವರು ದೇವರ ಕಾರ್ಯಗಳಲ್ಲಿ ಕೆಲವು ಭಾಗಗಳನ್ನು ನಿರ್ವಹಿಸಲು ಪ್ರತಿಯೊಬ್ಬ ಸಭಾ ಸದಸ್ಯರಿಗೂ ಅವಕಾಶವನ್ನು ನೀಡುವ ಮಾರ್ಗಗಳನ್ನು ಮತ್ತು ವಿಧಾನಗಳನ್ನು ರೂಪಿಸಬೇಕು. ಈ ಹಿಂದೆ ಇದನ್ನು ಆಗಾಗ್ಗೆ ಮಾಡಲಾಗಿಲ್ಲ. ಯೋಜನೆಗಳನ್ನು ಸ್ಪಷ್ಟವಾಗಿ ಹಾಕಲಾಗಿಲ್ಲ ಮತ್ತು ಎಲ್ಲರ ಪ್ರತಿಭೆಗಳನ್ನು ಸಕ್ರಿಯ ಸೇವೆಯಲ್ಲಿ ಸಂಪೂರ್ಣವಾಗಿ ಬಳಸಿಕೊಳ್ಳಬಹುದು. ಇದರಿಂದ ಎಷ್ಟು ನಷ್ಟವಾಗಿದೆ ಎಂದು ಅರಿತುಕೊಳ್ಳುವವರು ಕಡಿಮೆ".

"ದೇವರ ಉದ್ದೇಶದಲ್ಲಿ ನಿರತರಾಗಿರುವ ನಾಯಕರು ಬುದ್ಧಿವಂತ ಸೇನಾಪತಿಗಳಂತೆ, ಪ್ರತಿಯೊಂದು ಹಂತಗಳಲ್ಲಿಯೂ ಅಭಿವೃದ್ಧಿಪಡಿಸುವ ಯೋಜನೆಗಳನ್ನು ಹಾಕುತ್ತಾರೆ. ಅವರ ಯೋಜನೆಯಡಿಯಲ್ಲಿ ಸಭಾ ಸದಸ್ಯರು

ತಮ್ಮ ಸ್ನೇಹಿತರು ಮತ್ತು ನೆರೆಹೊರೆಯವರಿಗಾಗಿ ಮಾಡಬಹುದಾದ ಕೆಲಸಕ್ಕೆ ವಿಶೇಷ ಅಧ್ಯಯನವನ್ನು ಅವರಿಗೆ ನೀಡುತ್ತಾರೆ. ಸಭಾ ಸದಸ್ಯತ್ವದಲ್ಲಿರುವ ಪುರುಷರು ಮತ್ತು ಮಹಿಳೆಯರು ಒಟ್ಟುಗೂಡಿ ಉಪದೇಶಕರು ಮತ್ತು ಸಭಾ ಅಧಿಕಾರಿಗಳೊಂದಿಗೆ ಕೆಲಸ ಮತ್ತು ಅವರ ಪ್ರಯತ್ನಗಳನ್ನು ಒಂದುಗೂಡಿಸುವವರೆಗೂ ಈ ಭೂಮಿಯಲ್ಲಿ ದೇವರ ಕೆಲಸ ಅಂತ್ಯವಾಗುವುದಿಲ್ಲ".

"ಪಾಪಿಗಳ ರಕ್ಷಣೆಯಲ್ಲಿ ಶ್ರದ್ಧೆ, ವೈಯಕ್ತಿಕ ಶ್ರಮ ಅಗತ್ಯವಿದೆ. ನಾವೂ ಅವರನ್ನು ಸಹಿಸಿಕೊಳ್ಳಬೇಕು, ಜೀವನದ ಮಾತುಗಳು ನಮ್ಮ ಬಳಿಗೆ ಬರುವವರೆಗೆ ಕಾಯಬಾರದು. ಓಹ್, ಪರಿಶ್ರಮ ಕಾರ್ಯಕ್ಕಾಗಿ ಪುರುಷರು ಮತ್ತು ಮಹಿಳೆಯರು ಪ್ರಚೋದಿಸುವ ಮಾತುಗಳನ್ನು ನಾನು ಮಾತನಾಡಬಲ್ಲೆ! ಈಗ ನಮಗೆ ನೀಡಲಾದ ಕ್ಷಣಗಳು ಕಡಿಮೆ. ನಾವು ಶಾಶ್ವತ ಲೋಕದ ಅಂಚಿನಲ್ಲಿ ನಿಂತಿದ್ದೇವೆ. ನಾವು ಸಮಯವನ್ನು ಕಳೆದುಕೊಳ್ಳಬಾರದು. ಸ್ವಯಂ ಸೇವೆಗೆ ಭಯಭಕ್ತಿಯುಳ್ಳವರಾಗುವುದಕ್ಕೆ ಪ್ರತಿಯೊಂದು ಕ್ಷಣವೂ ಸುವರ್ಣವಾಗಿದೆ ಮತ್ತು ಒಟ್ಟಾರೆಯಾಗಿ ಬಹಳ ಅಮೂಲ್ಯವಾಗಿದೆ. ಧರ್ಮಪ್ರಚಾರ ಕ್ಷೇತ್ರದಲ್ಲಿ ಆತನ ನಂಬಿಗಸ್ತ ಕೆಲಸಗಾರರಾಗುವುದಕ್ಕೆ ಬಲ ಮತ್ತು ಕೃಪೆಯನ್ನು ಆತನಿಂದ ಪಡೆದುಕೊಳ್ಳಲು ಯಾರು ದೇವರನ್ನು ಶ್ರದ್ಧೆಯಿಂದ ಹುಡುಕುತ್ತಾರೆ?"

"ಪ್ರತಿಯೊಂದು ಸಭೆಯಲ್ಲಿ ಪ್ರತಿಭೆ ಇದೆ. ಸರಿಯಾದ ರೀತಿಯ ಶ್ರಮದೊಂದಿಗೆ ಈ ಕೆಲಸದಲ್ಲಿ ಹೆಚ್ಚಿನ ಸಹಾಯವನ್ನು ನೀಡುವುದಕ್ಕೆ ಅಭಿವೃದ್ಧಿ ಹೊಂದಬಹುದು. ನಮ್ಮ ಸಭೆಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಈಗ ಬೇಕಾಗಿರುವುದು ಬುದ್ಧಿವಂತ ಕೆಲಸಗಾರರ ಉತ್ತಮ ಕೆಲಸ ಮತ್ತು ಸಭೆಯಲ್ಲಿ ವೃದ್ಧಿಯಾಗುವ ಪ್ರತಿಭೆ–ಯಾಜಮಾನನ ಉಪಯೋಗಕ್ಕಾಗಿ ಪ್ರತಿಭೆಯನ್ನು ಶಿಕ್ಷಣಗೊಳಿಸಬಹುದು" – ಎಲೆನ್ ಜಿ ವೈಟ್, ಟೆಸ್ಟಿಮೋನಿಸ್ ಫಾರ್ ದಿ ಚರ್ಚ್, ಸಂಪುಟ 9, ಪುಟಗಳು 166, 167.

## ಚರ್ಚಿಸಬೇಕಾದ ಪ್ರಶ್ನೆಗಳು

1. ಮೇಲಿನ ಎಲೆನ್ ಜಿ ವೈಟ್‌ರವರ ಉಲ್ಲೇಖನದ ಮುಖ್ಯ ಆಲೋಚನೆ ಏನು? ನಿಮ್ಮ ವೈಯಕ್ತಿಕ ಸಾಕ್ಷಿ ಮತ್ತು ನಿಮ್ಮ ಸಭೆಯ ಹೊರಗಿನವರಿಗೆ

ತಲುಪುವ ಸೇವೆಯ ಮೇಲೆ ಅದು ಯಾವ ರೀತಿಯ ಪರಿಣಾಮವನ್ನು ಬೀರುತ್ತದೆ?

2. ನಿಜವಾದ ಪ್ರೀತಿ ಹೇಗೆ ವ್ಯಕ್ತವಾಗುತ್ತದೆ? ನಿಜವಾದ ಪ್ರೀತಿಯೊಂದಿಗೆ ಹೆಚ್ಚು ಸಂಬಂಧವಿಲ್ಲದ ಪ್ರೀತಿಯ ನಕಲಿ ರೂಪಗಳು ಯಾವುವು?

3. ತರಗತಿಯಲ್ಲಿ, ಜನರು ದೇವರಿಗಾಗಿ ಮಾಡಿದ ತ್ಯಾಗಗಳು, ಜೀವನವನ್ನು ಕಳೆದುಕೊಂಡದ್ದರ ಬಗ್ಗೆ ಮಾತನಾಡಿರಿ, ಈ ಕಥೆಗಳಿಂದ ನೀವು ಏನು ಕಲಿಯಬಹುದು?

4. ನೀವು ಕ್ರಿಸ್ತನಿಗಾಗಿ ಏನು ತ್ಯಾಗ ಮಾಡಿದ್ದೀರಿ ಎಂಬುದರ ಕುರಿತು ಭಾನುವಾರದ ಅಧ್ಯಯನದ ಕೊನೆಯಲ್ಲಿ ನಿಮ್ಮ ಉತ್ತರದ ಬಗ್ಗೆ ಆಲೋಚಿಸಿರಿ. ವಾಸ್ತವವಾಗಿ, ನೀವು ಏನು ತ್ಯಾಗ ಮಾಡಿದ್ದೀರಿ? ನೀವು ಅದನ್ನು ಯಾಕೆ ಮಾಡಿದ್ದೀರಿ? ಅದು ಯೋಗ್ಯವಾಗಿದೆಯೇ? ನೀವು ಏನು ಮಾಡಿದ್ದೀರಿ, ಅದನ್ನು ಯಾಕೆ ಮಾಡಿದ್ದೀರಿ ಎಂಬುದರ ಬಗ್ಗೆ ಕ್ರೈಸ್ತರಲ್ಲದವರಿಗೆ, ನೀವು ಹೇಗೆ ವಿವರಿಸಬಹುದು?